ಸಾಲಿನಲ್ಲಿ ಇಲ್ಲವೆಂದು ಹೇಳಿದೆ. ನಾನು ತಮ್ಮ ಮುಖಾಂತರ ಏನಂತಿಸಿಕೊಳ್ಳುವುದೇನೆಂದರೆ ಇದು ತಾಲ್ಲೂಕು ಕೇಂದ್ರವಾಗಿದ್ದು ಅಲ್ಲಿ ಯಾವುದೇ ಸೌಲಭ್ಯವಿಲ್ಲದೆ ಇರುವಂತಹ ಪರಿಸ್ಥಿತಿ ಇದೆ. ತಾವು ಆ ಆಸ್ಪತ್ರೆಗೆ ಬಂದು ನೋಡಿದರೆ ಗೊತ್ತಾಗುತ್ತದೆ. ಆಸ್ಪತ್ರೆಯ ಹೊರಗಡೆ ಮರದ ಕೆಳಗೆ ರೋಗಿಗಳು ಇದ್ದಾರೆ. ಅಂತಹ ಒಂದು ಪರಿಸ್ಥಿತಿಯಲ್ಲಿರತಕ್ಕ ಒಂದು ಆಸ್ಪತ್ರೆಗೆ ಈ ಸಾಲಿನಲ್ಲಿ ಆದರೂ ೫೦ ಬೆಡ್‌ಗಳಿಗೆ ಪರಿವರ್ತನೆ ಮಾಡಿ ಕೊಡುತ್ತಾರೆಯೆ ಎಂದು ನಾನು ಸರ್ಕಾರವನ್ನು ಕೇಳುತ್ತಿದ್ದೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:- ಅಲ್ಲಿಯ ಎಕ್ಸ್-ರೇ ಟೆಕ್ನಿಶಿಯನ್ ಅವರನ್ನು ಸಸ್ಪೆಂಡ್ ಮಾಡಿದ್ದುದು ಸರಿ. ಎಕ್ಸ್-ರೇ ಟೆಕ್ನಿಶಿಯನ್ ಒಬ್ಬರನ್ನು ಬೇಗನೆ ಭರ್ತಿ ಮಾಡುತ್ತೇವೆ. ನಾನು ಆಗಲೇ ಹೇಳಿದಹಾಗೆ ತಾಲ್ಲೂಕು ಸಬ್ ಡಿವಿಜನ್‌ನಲ್ಲಿ ೫೦ ಬೆಡ್‌ಗಳ ಆಸ್ಪತ್ರೆಯನ್ನು ಮಾತ್ರ ಸ್ಯಾಂಕ್ಷನ್ ಮಾಡುತ್ತೇವೆ. ತಾಲ್ಲೂಕು ಹೆಡ್‌ಕ್ವಾಟ್ರರ್ಸ್‌ನಲ್ಲಿ ನೂರು ಬೆಡ್‌ಗಳ ಆಸ್ಪತ್ರೆಯನ್ನು ಎಲ್ಲಿಯೂ ಸಹ ಮಂಜೂರು ಮಾಡಿಲ್ಲ. ಅಗತ್ಯ ಬಿದ್ದಲ್ಲಿ ನೀವು ಅದರ ಬಗ್ಗೆ ಕನ್ವಿನ್ಸ್ ಮಾಡಿದರೆ ಅದನ್ನು ಪರಿಶೀಲನೆ ಮಾಡುತ್ತೇವೆ.

ವಿಷಯ:- ಬೆಂಗಳೂರು ನಗರದಲ್ಲಿ ಕೆ.ಎಂ.ಎಫ್. ಬಲ್ಕ್ ವೆಂಡಿಂಗ್ ಬೂತ್‌ಗಳ ಸಂಖ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ. ೩೩:- (೨೮೫)
ಶ್ರೀ ಆರ್. ದಯಾನಂದ ರಾವ್, (ಗಾಂಧಿನಗರ)
ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ನಗರದಲ್ಲಿ ಕೆಲಸ ನಿರ್ವಹಿಸುತ್ತಿರುವ ಬಲ್ಕ್ ವೆಂಡಿಂಗ್ ಬೂತುಗಳ ಒಟ್ಟು ಸಂಖ್ಯೆ.
ಆ) ಪ್ರತಿ ಬೂತಿಗೆ ತಗಲುವ ನೀರು ವಿದ್ಯುಚ್ಛಕ್ತಿ, ಮತ್ತು ಇತರೆ ಖರ್ಚುಗಳ ಸರಾಸರಿ ಮಾಸಿಕ ನಿರ್ವಹಣಾ ವೆಚ್ಚ.
ಇ) ಎಲ್ಲಾ ಖರ್ಚುವೆಚ್ಚಗಳನ್ನು ಕಳೆದು ಗಳಿಸುವ ಸರಾಸರಿ ಆದಾಯ (ಎಲ್ಲಾ ಬೂತುಗಳಿಂದಲೂ)
ಈ) ಎಲ್ಲಾ ಬೂತುಗಳಿಂದಲೂ ಸೇರಿ ಮಾಸಿಕ ನಷ್ಟ.
ಉ) ಈ ಹಾಲು ಬೂತುಗಳನ್ನು ಮೇಲ್ವಿಚಾರಣೆ ಅಧಿಕಾರದೊಂದಿಗೆ ಗುತ್ತಿಗೆ ಆಧಾರದ ಮೇಲೆ ಖಾಸಗಿಯವರಿಗೆ ನೀಡುವ ಪ್ರಸ್ತಾವನೆ ಏನಾದರೂ ಇದೆಯೇ?

ಶ್ರೀ. ಕೆ.ಎನ್. ನಾಗೇಗೌಡ
(ಪಶು ಸಂಗೋಪನಾ ರಾಜ್ಯ ಸಚಿವರು)

೧೧೯
ರೂ. ೩,೮೫೬-೦೦
ಪ್ರತಿ ತಿಂಗಳ ಒಟ್ಟು ಆದಾಯ ರೂ. ೫೩,೮೬೧-೦೦ ಸರಾಸರಿ ಆದಾಯ ರೂ. ೪೫೩-೦೦.
ಉದ್ಭವಿಸುವುದಿಲ್ಲ.
ಇಲ್ಲ.

ಶ್ರೀ ಆರ್. ದಯಾನಂದ ರಾವ್:- ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ೧೯೦ ಬೂತ್‌ಗಳಿಂದ ೫೩,೮೬೧ ರೂಪಾಯಿ ಆದಾಯ ಬರತ್ತಿದ್ದು, ಸರಾಸರಿ ಒಂದು ಬೂತ್‌ನಿಂದ ೪೫೩ ರೂಪಾಯಿ ಆದಾಯ ಸಿಗುತ್ತದೆಂದು ಮಾನ್ಯಮಂತ್ರಿಗಳು ಹೇಳಿದ್ದಾರೆ. ಒಂದು

ಬೂತ್‌ನಿಂದ ೪೫೩ ರೂಪಾಯಿ ಆದಾಯ ಪಡೆಯುವುದಕ್ಕೆ ಆ ಬೂತ್‌ಗಳನ್ನು ಕಟ್ಟುವುದಕ್ಕೆ ಎಷ್ಟು ಖರ್ಚು ಮಾಡಿದ್ದೀರಿ? ಮತ್ತು ವಿಶ್ವಬ್ಯಾಂಕಿನಿಂದ ತಾವೇನು ನೆರವು ಪಡೆದಿದ್ದೀರಿ ಅದಕ್ಕೆ ಬಡ್ಡಿಯನ್ನು ಎಷ್ಟು ಕಟ್ಟುತ್ತಾ ಇದ್ದೀರಿ? ಬರುವ ಲಾಭ ವಿಶ್ವಬ್ಯಾಂಕಿಗೆ ಕಟ್ಟುವ ಬಡ್ಡಿಗೆ ಸರಿಸಮಾನವಾಗುತ್ತದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಕೆ.ಎನ್. ನಾಗೇಗೌಡ:- ಮಾನ್ಯ ಅಧ್ಯಕ್ಷರೆ, ಮಾನ್ಯಸದಸ್ಯರು ಈಗಾಗಲೇ ಹೇಳಿರುವ ರೀತಿಯಲ್ಲಿ ಬೆಂಗಳೂರು ನಗರದಲ್ಲಿ ೧೧೯ ಬೂತ್‌ಗಳು ಕೆಲಸ ಮಾಡುತ್ತಿವೆ. ನ್ಯಾಷನಲ್ ಡೈರಿ ಡೆವಲಪ್‌ಮೆಂಟ್ ನವರ ಅಸೆಸ್‌ಮೆಂಟ್ ಪ್ರಕಾರ ೧೨೧ ಬಲ್ಕ್ ವೆಂಡಿಂಗ್ ಬೂತುಗಳನ್ನು ಬೆಂಗಳೂರು ನಗರದಲ್ಲಿ ತೆರೆಯಬೇಕೆಂದು ತೀರ್ಮಾನವಾಗಿತ್ತು. ಆದರೆ ಈಗಾಗಲೇ ಎರಡು ಬೂತ್‌ಗಳು ಕೆಲಸ ಮಾಡುತ್ತಿವೆ. ಒಂದು ಬೂತ್ ನಿರ್ಮಾಣ ಮಾಡಲು ಸುಮಾರು ಒಂದೂವರೆ ಎರಡು ಲಕ್ಷ ರೂಪಾಯಿ ಖರ್ಚಾಗುತ್ತದೆ. ವಿಶ್ವಬ್ಯಾಂಕಿನ ಹಿನ್ನೆಲೆ ಏನೆಂದರೆ ಅವುಗಳನ್ನು ಮಾಜಿ ಸೈನಿಕರಿಗೆ ಕೊಡಬೇಕೆಂದು ಮದರ್ ಡೈರಿಯವರ ಕಾನ್ಸೆಪ್ಟ್ ಇದ್ದದ್ದು. ಆದರೆ ಮದರ್ ಡೈರಿಯಲ್ಲಿ ಕೆಲವು ಕಲಬೆರಕೆ ಪ್ರಕರಣಗಳು ಬಹಳಷ್ಟು ಕಂಡುಬಂದಿವೆ. ಆಮೇಲೆ ಬೆಂಗಳೂರು ನಗರದಲ್ಲಿ ೧,೭೪,೦೦೦ ಲೀಟರ್ ಹಾಲನ್ನು ಒಂದು ದಿವಸಕ್ಕೆ ಸಪ್ಲೈ ಮಾಡುತ್ತಿದ್ದೇವೆ. ಬೆಂಗಳೂರುನಗರದ ಜನಸಂಖ್ಯೆ ೫೪ ಲಕ್ಷ ಎಂದು ಲೆಕ್ಕಹಾಕಿದರೆ ಒಬ್ಬ ವ್ಯಕ್ತಿಗೆ, ೨೦೦ ಮಿಲಿಲೀಟರ್ ಎಂದು ಲೆಕ್ಕ ಇಟ್ಟುಕೊಂಡರೆ ಬೆಂಗಳೂರು ನಗರ ಒಂದಕ್ಕೆ ೧೦ ಲಕ್ಷ ಲೀಟರ್ ಹಾಲು ಬೇಕಾಗುತ್ತದೆ. ಬೆಂಗಳೂರು ನಗರದಲ್ಲಿ ನಾವು ಸಪ್ಲೈ ಮಾಡುತ್ತಿರುವುದು ೫ ಲಕ್ಷ ೩೪ ಸಾವಿರ ಲೀಟರ್ ಮಾತ್ರ. ನಾವು ಪ್ರಕ್ಯೂರ್‌ಮೆಂಟ್ ಮಾಡತಕ್ಕ ಹಾಲು ಹದಿಮೂರುವರೆ ಲಕ್ಷ ಲೀಟರ್. ಅದರಲ್ಲಿ ಸುಮಾರು ೯,೨೦,೦೦೦ ಲೀಟರ್ ಹಾಲನ್ನು ಪ್ರತಿನಿತ್ಯ ನಾವು ಮಾರಾಟ ಮಾಡುತ್ತಿದ್ದೇವೆ. ಮಾನ್ಯಸದಸ್ಯರಾದ ದಯಾನಂದರಾವ್‌ರವರು ಇದರ ಮೇಲ್ವಿಚಾರಣೆಯನ್ನು ಖಾಸಗೀಯವರಿಗೆ ನೀಡುತ್ತೀರಾ ಎಂದು ಕೇಳಿದ್ದಾರೆ. ಇದನ್ನು ಖಾಸಗಿಯವರಿಗೆ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಮಾಜಿ ಸೈನಿಕರಿಗೆ ಕೊಡಬೇಕೆಂದು ಇದ್ದದ್ದನ್ನು ನಾವು ಖಾಸಗಿಯವರಿಗೆ ಕೊಟ್ಟರೆ ನಾವು ಎಲ್ಲೂ ಸಹ ಕಲಬೆರಕೆಯನ್ನು ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ನಾನು ಅಧಿಕಾರಕ್ಕೆ ಬಂದಮೇಲೆ ಒಂದಿಷ್ಟು ಸ್ಯಾಂಪಲ್ಸ್ ನೋಡಿಯೆಂದು ಹುಡುಕಿಸಿದೆ. ಸುಮಾರು ೨೨೫೦ ಕೇಸುಗಳನ್ನು ಸ್ಯಾಂಪಲ್ ತೆಗೆದುಕೊಂಡು ಪರಿಶೀಲನೆ ಮಾಡಿದ್ದೇವೆ. ಅದರಲ್ಲಿ ೧೯೨ ಕೇಸುಗಳನ್ನು ರಿಜಿಸ್ಟರ್ ಮಾಡಿದ್ದೇವೆ. ಫೆಬ್ರವರಿ ಒಂದು ತಿಂಗಳಿನಲ್ಲೇ ೧೨ ಏಜೆಂಟರು ಗಳನ್ನು ಕ್ಯಾನ್ಸಲ್ ಮಾಡಿದ್ದೇವೆ. ಮೊದಲನೆಯ ಹಂತದಲ್ಲಿಯೇ ಕಲಬೆರಕೆ ಮಾಡುವ ಏಜೆಂಟರುಗಳನ್ನು ೨೦ ಏಜೆಂಟರುಗಳನ್ನು ಕ್ಯಾನ್ಸಲ್ ಮಾಡಿದ್ದು. ಅದರಲ್ಲಿ ಫೆಬ್ರವರಿ ಒಂದು ತಿಂಗಳಿನಲ್ಲಿ ೧೨ ಏಜೆಂಟರುಗಳನ್ನು ಕ್ಯಾನ್ಸಲ್ ಮಾಡಿದ್ದೇವೆ. ಆದ್ದರಿಂದ ಇಲ್ಲಿ ಬೇರೆ ಆದಾಯ ಅಥವಾ ಲಾಭವೆಂದು ಹೇಳುವುದಕ್ಕಿಂತ ಎಷ್ಟರಮಟ್ಟಿಗೆ ಬೆಂಗಳೂರು ನಗರಕ್ಕೆ ಉತ್ತಮ ಗುಣಮಟ್ಟವುಳ್ಳ ಹಾಲನ್ನು ಅತ್ಯಂತ ಅಲ್ಪ ಕಾಲದಲ್ಲಿ ಸರಬರಾಜು ಮಾಡುವುದಕ್ಕಾಗುತ್ತದೆ ಎನ್ನುವುದು ಬಹಳ ಪ್ರಧಾನವಾದ ವಿಚಾರ. ಕೆಲವು ಕಡೆಗಳಲ್ಲಿ ಹಾಲು ಇನ್‌ಟೈಮಗೆ ಸಿಗುವುದಿಲ್ಲ. ಬೆಳಿಗ್ಗೆ ೫ ಗಂಟೆಯಿಂದ ೯ ಗಂಟೆಯವರೆಗೆ ಬೂತ್ ಇರಬೇಕೆಂದು ಇದೆ. ಮತ್ತು ಸಂಜೆ ೨ ಗಂಟೆಯಿಂದ ೮ ಗಂಟೆಯವರೆಗೆ ಇರಬೇಕೆಂದು ಇದೆ. ಹಾಲು ಸಿಗುವುದಿಲ್ಲವೆಂದು ಹೇಳಿ, ಬೆಳಿಗ್ಗೆ ೫ ಗಂಟೆಯಿಂದ ೯ ಗಂಟೆಯವರೆಗೆ ಇದ್ದದನ್ನು ಬೆಳಿಗ್ಗೆ ೫ ಗಂಟೆಯಿಂದ ೧೦ ಗಂಟೆಯವರೆಗೆ ಬೂತ್ ತೆರೆಯುವಂತೆ ಕಳೆದ ಎರಡು ದಿವಸಗಳ ಹಿಂದೆ ಹೇಳಿದ್ದೇನೆ. ೧೧೯ ಬೂತುಗಳು ಸುಮಾರು ಒಂದು ಗಂಟೆಕಾಲ ಹೆಚ್ಚು ಬೆಂಗಳೂರು ನಗರದಲ್ಲಿ ಕೆಲಸ ಮಾಡುತ್ತಿವೆ. ಆದ್ದರಿಂದ ಮದರ್ ಡೈರಿ ಬಗ್ಗೆ ನನಗೆ ಸಂಪೂರ್ಣವಾದಂಥ ಸಮಾಧಾನ ಇಲ್ಲ. ಬೆಂಗಳೂರು ಡೈರಿಯಲ್ಲಿ ಉತ್ತಮವಾದ ಹಾಲು ಸಪ್ಲೈ ಮಾಡುತ್ತಿದ್ದೇವೆ. ಸುಮಾರು ೧,೦೭೬ ಜನ ಏಜೆಂಟ್ಸ್‌ಇದ್ದಾರೆ.

ಐದು ಲಕ್ಷ ಲೀಟರ್ ಹೆಚ್ಚು ಹಾಲು ಸಪ್ಲೈ ಮಾಡುತ್ತಿದ್ದೇವೆ. ಆ ಬೆಂಗಳೂರು ಡೈರಿ ಪರವಾಗಿಲ್ಲ. ಆದರೆ ಮದರ್ ಡೈರಿಯಲ್ಲಿ ೧೦೦ ಪರ್ಸೆಂಟ್ ಫ್ಯಾಟ್ ಇರತಕ್ಕಂಥ ಹಾಲನ್ನು ಏಳು ರೂಪಾಯಿಗೆ ಕೊಡುವುದರಿಂದ ಅಲ್ಲಿ ಎಲ್ಲಿಬೇಕಾದೂ ಕಲಬೆರಕೆ ಆಗುವಂಥ ಸಾಧ್ಯತೆ ಇರುವುದರಿಂದ ಖಾಸಗಿಯವರಿಗೆ ಕೊಡತಕ್ಕಂಥ ಪ್ರಶ್ನೆ ಸಂಪೂರ್ಣವಾಗಿ ತಿರಸ್ಕರಿಸಲ್ಪಡುತ್ತದೆ.

ಶ್ರೀ ಆರ್. ಧ್ರುವನಾರಾಯಣರಾವ್:- ಸನ್ಮಾನ್ಯ ಅಧ್ಯಕ್ಷರೇ, ಉತ್ತಮವಾದ ಹಾಲನ್ನು ಕೆ.ಎಂ.ಎಫ್.ನಿಂದ ಕೊಡುವುದಾಗಿ ಹೇಳಿದ್ದೀರಿ, ಸಂತೋಷ. ಆದರೆ ಕರೆಂಟ್ ನಿಂತಿದ್ದಾಗ ಅಳೆದು ಅಳೆದು ಕೊಡುತ್ತಾರೆ. ಆವಾಗ ಅವ್ಯವಹಾರ ಆಗುತ್ತಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನಾದರೂ ಕ್ರಮ ತೆಗೆದುಕೊಳ್ಳುತ್ತಾರೆಯೆ? ಅಥವಾ ತೆಗೆದುಕೊಂಡಿದ್ದೀರಾ? ಎಷ್ಟು ಪ್ರಕರಣಗಳಲ್ಲಿ ಇದುವರೆಗೆ ಸೀಜ್ ಮಾಡಿದ್ದೀರಿ?

ಶ್ರೀ ಕೆ.ಎನ್. ನಾಗೇಗೌಡ:- ಈಗಾಗಲೇ ೧೧ ಜನ ಇನ್‌ಸ್ಪೆಕ್ಟರ್‌ಗಳನ್ನು ಬೆಂಗಳೂರು ಡೈರಿಯಲ್ಲಿ ಹಾಕಿದ್ದೇವೆ. ೪ ಜನ ಇನ್‌ಸ್ಪೆಕ್ಟರ್‌ಗಳನ್ನು ಮದರ್‌ಡೈರಿಯಲ್ಲಿ ಹಾಕಿದ್ದೇವೆ. ನಾನು ಆಗಲೇ ಹೇಳಿದಹಾಗೆ ೨,೧೫೦ ಕೇಸ್ ಸ್ಯಾಂಪಲ್ಸ್‌ನ್ನು ಈಗಾಗಲೇ ಕಂಡುಹಿಡಿದಿದ್ದಾರೆ. ೧೯೨ ಕೇಸ್‌ಗಳನ್ನು ರಿಜಿಸ್ಟರ್ ಮಾಡಿದ್ದಾರೆ. ಸುಮಾರು ೨೦ ಏಜೆಂಟರುಗಳನ್ನು ಕ್ಯಾನ್ಸಲ್ ಮಾಡಿದ್ದಾರೆ. ಈಗಾಗಲೇ ವೈರ್‌ಲೆಸ್ ಕೊಟ್ಟು ಎಲ್ಲೆಲ್ಲಿ ಇನ್‌ಸ್ಪೆಕ್ಟರ್ಸ್ ಇದ್ದಾರೆ, ಅವರು ಏಜೆಂಟ್ಸ್‌ಗಳ ಮೇಲೆ ಮತ್ತು ಬೂತುಗಳನ್ನು ನೋಡಿಕೊಳ್ಳುವವರ ಮೇಲೆ ಹೆಚ್ಚಿನ ಉಸ್ತುವಾರಿ ಹಾಕತಕ್ಕಂಥ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಇದರ ಜೊತೆಗೆ ಬೆಂಗಳೂರು ನಗರದಲ್ಲಿ ಹತ್ತು ಲಕ್ಷಲೀಟರ್ ಮಿರಿದಂಥ ಹಾಲನ್ನು ಮಾರುವ ಅವಕಾಶ ಇರುವುದರಿಂದ ಯುಗಾದಿ ಒಳಗೆ ನೂರು ಮದರ್ ಡೈರಿ, ನೂರು ಬೆಂಗಳೂರು ಡೈರಿಯ ಒಟ್ಟು ಇನ್ನೂರು ಬೂತುಗಳನ್ನು ಜಾಸ್ತಿ ಮಾಡಿ, ಏಜೆನ್ಸಿಗಳನ್ನು ಕೂಡ ಜಾಸ್ತಿ ಮಾಡಬೇಕೆಂದು ಕಾರ್ಯಕ್ರಮ ಹಾಕಿ ಕೊಂಡಿದ್ದೇವೆ. ಈ ಇನ್ನೂರು ಬೂತುಗಳನ್ನು ಮಾರ್ಚ್ ೨೬-೨೭ರ ಒಳಗಡೆ ಬೆಂಗಳೂರು ನಗರದಲ್ಲಿ ಮಾಡುತ್ತಿದ್ದೇವೆ. ಎರಡನೆಯದಾಗಿ ಉತ್ತಮವಾದ ಸೇವೆ ಕೊಡಬೇಕು ದೂರುಗಳನ್ನು ಸ್ವೀಕಾರ ಮಾಡಿಕೊಂಡು ಗ್ರಾಹಕರು ಕೊಡತಕ್ಕ ಏಳು ರೂಪಾಯಿಗೆ ತಕ್ಕಂತೆ ಹಾಲನ್ನು ಸಮಾಧಾನಕರವಾದ ಹಾಲನ್ನು ಸರಬರಾಜು ಮಾಡತಕ್ಕಂಥ ಹಿನ್ನಲೆಯಲ್ಲಿ ಒಂದು ಪಬ್ಲಿಕ್ ಗ್ರಿವೆನ್ಸಸ್‌ಸೆಲ್ ಎಂದು ಮಾಡಿದ್ದೇವೆ. ಅದರ ಟೆಲಿಫೋನ್ ನಂಬರುಗಳನ್ನು ಕೊಟ್ಟಿದ್ದೇವೆ. ಸ್ವತಃ ನಾನೇ ನಿಂತು ಫೆಬ್ರವರಿ ೧೯ನೇ ತಾರೀಖಿಗೆ ಜಯನಗರ ಮತ್ತು ಕ್ವೀನ್ಸ್‌ರೋಡ್‌ನಲ್ಲಿ ಮಾರಾಟ ಸಪ್ತಾಹ ಮಾಡುತ್ತಿದ್ದೇನೆ. ನಾನು ಮಂತ್ರಿಯಾಗಿ ಖುದ್ದಾಗಿ ಸಾರ್ವಜನಿಕರಿಂದ ಬಂದಂಥ ದೂರುಗಳನ್ನು ತೆಗೆದುಕೊಂಡು ಅದನ್ನು ಎಲೇವಾರಿ ಮಾಡಿ, ಜನರ ತೊಂದರೆಗಳನ್ನು ಆದಷ್ಟು ಕಡಿಮೆ ಮಾಡುವ ಪ್ರಯತ್ನ ಮಾಡುತ್ತಿದ್ದೇನೆ.

ಶ್ರೀ ಎ.ಕೆ. ಅನಂತಕೃಷ್ಣ :- ಮಾನ್ಯ ಸಚಿವರ ಸ್ಟೇಟ್‌ಮೆಂಟ್ ಆಫ್ ಪಾಲಿಸಿ ಅಂಡ್ ಪ್ರೋಗ್ರಾಮ್ ಏನು ಹೇಳಿದ್ದಾರೆ ಅದು ಬಹಳ ಚೆನ್ನಾಗಿ ಇದೆ. ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಬೂತುಗಳನ್ನು ಪ್ರಾರಂಭ ಮಾಡಿದ ಮೂಲ ಉದ್ದೇಶ ಏನು? ಹಾಲು ಯಾರಿಗೆ ಸೇರಬೇಕು ಎಂದು ಮಾಡಿದ್ದುದು?

ಶ್ರೀ ಕೆ.ಎನ್. ನಾಗೇಗೌಡ:- ಮೂಲ ಉದ್ದೇಶ ಏನು ಎಂದರೆ ಸಾರ್ವಜನಿಕರಿಗೆ, ಗ್ರಾಹಕರಿಗೆ ಹಾಲು ಸಿಗಬೇಕು ಎನ್ನುವುದು. ಬೆಂಗಳೂರು ನಗರದಲ್ಲಿ ೧೦ ಲಕ್ಷ ಲೀಟರ್ ಹಾಲು ಸರಬರಾಜು ಮಾಡಬೇಕಾಗಿದೆ. ಆದರೆ ನಾವು ಮಾರಾಟ ಮಾಡತಕ್ಕದ್ದು ೫ಲಕ್ಷ ೩೪ ಸಾವಿರ ಲೀಟರ್. ಆದ್ದರಿಂದ ಬೂತುಗಳನ್ನು ಜಾಸ್ತಿ ಮಾಡಿ ಮಾರಾಟ ಮಾಡಿದರೆ ಎಲ್ಲರಿಗೂ ಕೂಡ ಹಾಲು ಕೊಡುವುದಕ್ಕೆ ಸಾಧ್ಯವಾಗುತ್ತದೆ.